ಇದಕ್ಕೆ ಅನೇಕ ಕಂಡೀಷನ್ಸ್‌ನ್ನು ಹಾಕುತ್ತಿದ್ದಾರೆ. ಇದು ಆಗದೇ ಇರತಕ್ಕ ಕೆಲಸ. ಈಗಂತೂ ಚನ್ನಪಟ್ಟಣ ಬಹಳ ದೊಡ್ಡದಾಗಿ ಬೆಳೆಯುತ್ತಿದೆ. ಊರಿನ ಹೊರಗಡೆ ಒಂದು ಕೆರೆ ಇದೆ. ಇದು ಜಿಲ್ಲಾ ಪರಿಷತ್ತಿನ ವಶದಲ್ಲಿದೆ. ಇದನ್ನು ಸರ್ಕಾರ ತೆಗೆದುಕೊಳ್ಳಬೇಕು. ಚನ್ನಪಟ್ಟಣದಲ್ಲಿ ಒಂದು ಬಸ್ ಸ್ಟ್ಯಾಂಡ್ ಮತ್ತು ಒಂದು ಬಸ್ ಡಿಪೋ ಎರಡು ಕೂಡ ಅವಶ್ಯಕತೆ ಇರುವುದರಿಂದ ಇವೆರಡನ್ನೂ ನೂಡಲಿಕ್ಕೆ ಸಾಧ್ಯವೇ?

ಶ್ರೀ ಅಜೀಜ್ ಸೇಠ್ :– ಬೆಂಗಳೂರಿನಿಂದ ಮೈಸೂರಿಗೆ ಹೋಗುವಾಗ ಚನ್ನಪಟ್ಟಣದ ಹತ್ತಿರ ನೋಡಿದರೆ ಅಲ್ಲಿ ಒಂದು ಕೆರೆ ಇದೆ. ಆದರೆ ಆದರಲ್ಲಿ ನೀರು ಇದೆ. ರೈಟ್ ಸೈಡ್‌ನಲ್ಲಿರತಕ್ಕ ಜಮೀನನ್ನು ರೆಗ್ಯುಲೇಟೆಡ್ ಮಾರ್ಕೆಟ್‌ನವರು ತೆಗೆದುಕೊಂಡಿದ್ದಾರೆ. ನಾನು ಮೈಸೂರು–ಬೆಂಗಳೂರಿಗೆ ಓಡಾಡುವಾಗ ನೋಡುತ್ತಲೇ ಇದ್ದೇನೆ. ಮಾನ್ಯ ಸದಸ್ಯರಿಗಿಂತಲೂ ಹೆಚ್ಚಿನ ಮಾಹಿತಿ ಇದರ ಬಗ್ಗೆ ನನಗಿದೆ. ಅಲ್ಲಿ ಒಂದು ಬಸ್ ಸ್ಟ್ಯಾಂಡ್ ಮತ್ತು ಒಂದು ಬಸ್ ಡಿಪೋ ಎರಡೂ ಕೂಡ ಬೇಕಾಗಿದೆ. ಇದರ ಬಗ್ಗೆ ನಾನು ಪರ್ಸನಲ್ ಆಗಿ ಇನ್‌ಸ್ಪೆಕ್ಷನ್ ಮಾಡಿ ಈ ವಿಚಾರವನ್ನು ಬಗೆಹರಿಸುತ್ತೇನೆ.

ಅಧ್ಯಕ್ಷರು :– ಈ ಬಸ್ ಸ್ಟ್ಯಾಂಡ್ ಸ್ಟೇಟ್ ಹೈವೇಗೆ ಬಹಳ ತೊಂದರೆ ಮಾಡುತ್ತಿದೆ.

Sri Aziz Sait :– Yes, Sir. The difficulty is to the Eastern side.....

Mr. Speaker :– Any way you are going to inspect the land.

Sri Aziz Sait :– I will have an inspection. I will do it by action.

ವಿಷಯ : ಶಿವಮೊಗ್ಗದಲ್ಲಿರುವ ಕ.ರಾ.ರ.ಸಾ. ಸಂಸ್ಥೆ ಬಸ್ಸು ನಿಲ್ದಾಣ ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೨೬೯ (೧೧೭೧)

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಶಿವಮೊಗ್ಗದ ಬಸ್ ನಿಲ್ದಾಣದ ಕಾರ್ಯ ನಿಂತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಬ) ಹಾಗಿದ್ದಲ್ಲಿ ಅದಕ್ಕೆ ಕಾರಣ ಏನು ?

ಕ) ಅದನ್ನು ಯಾವಾಗ ಶುರುಮಾಡಿ ಪೂರ್ಣಗೊಳಿಸಲಾಗುವದು ?

ಶ್ರೀ ಅಜೀಜ ಸೇತ್ ಸಾರಿಗೆ ಸಚಿವರು :

ಅ) ಇಲ್ಲ

ಬ) ಉದ್ಭವಿಸುವದಿಲ್ಲ

ಕ) ಈ ಕೆಲಸವನ್ನು ಖಂಡೇ ಮಾರ್ಚ ೧೯೯೧ ವೇಳೆಗೆ ಮುಗಿಸಲಾಗುವದು.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಈಗ್ಗೆ ೬ ತಿಂಗಳ ಮುಂಚೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಒಂದು ಉತ್ತರ ಬಂದಿದೆ. ಇವತ್ತೂ ಅದೇ ಪ್ರಶ್ನೆಯನ್ನು ಕೇಳಿದ್ದೇನೆ. ಇವೊತ್ತು ಒಂದು ಉತ್ತರ ಬಂದಿದೆ. "ಶಿವಮೊಗ್ಗಾದ ಬಸ್ ನಿಲ್ದಾಣದ ಕಾರ್ಯ ನಿಂತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?" ಎಂದು ಅವತ್ತು ನಾನು ಕೇಳಿದ್ದ ಪ್ರಶ್ನೆಗೆ "ಇದು ಸರ್ಕಾರದ ಗಮನಕ್ಕೆ ಬಂದಿದೆ" ಎಂದು ಅವತ್ತಿನ ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ.ಆದರೆ ಇವತ್ತು ಅದೇ ಪ್ರಶ್ನೆಗೆ ಈ ಸರ್ಕಾರ ಉತ್ತರವನ್ನು ಕೊಡುತ್ತಿದೆ "ಈ ಕೆಲಸಕಾರ್ಯ ನಿಂತು ಹೋಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ" ಎಂದು. ಅವತ್ತು ನಾನು ಇನ್ನೊಂದು ಪ್ರಶ್ನೆಯನ್ನು ಏನು ಕೇಳಿದ್ದೆ ಎಂದರೆ "ಎಷ್ಟು ಹಣ ಖರ್ಚಾಗಿದೆ : ಇನ್ನೂ ಎಷ್ಟು ಹಣ ಬೇಕಾಗಿದೆ" ಎಂದು. ಅದಕ್ಕೆ ಅವತ್ತು ಉತ್ತರವನ್ನು ಕೊಟ್ಟಿದ್ದಾರೆ ಇದುವರೆಗೆ ೩.೬೫ ಲಕ್ಷ ರೂ. ಖರ್ಚಾಗಿದೆ. ಇನ್ನೂ ೬.೩೫ ಲಕ್ಷ ರೂ. ಬೇಕಾಗಿದೆ ಎಂದು. ಈ ಕೆಲಸವನ್ನು ಯಾವಾಗ ಮುಗಿಸುತ್ತೀರಿ ಎಂದು ನಾನು ಕೇಳಿದ್ದುದಕ್ಕೆ ೧೯೯೦ ಅಕ್ಟೋಬರ್‌ನಲ್ಲಿ ಮುಗಿಸುತ್ತೇವೆಂದು ಹೇಳಿದ್ದರು.

Sri Aziz Sait : If the Hon. Member could ask me a question, I will answer.

ಶ್ರೀ ನಾಟಾಳ ನಾಗರಾಜ : ಕೊಟ್ಟರತಕ್ಕ ಉತ್ತರದಲ್ಲಿ ಬಹಳ ವ್ಯತ್ಯಾಸ ಇದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ

ಶ್ರೀ ಕೆ. ಎಸ್. ಈಶ್ವರಪ್ಪ : ಶಿವಮೊಗ್ಗಾದಲ್ಲಿ ಬಸ್ ಸ್ಟ್ಯಾಂಡಿನ ಕೆಲಸ ನಿಂತು ಬಹಳ ವರ್ಷಗಳಾಗಿದೆ. ಅಲ್ಲಿ ಹೆಣ್ಣುಮಕ್ಕಳು ಕಕ್ಕುಸಿಗೆ ಹೋಗುವುದಕ್ಕೆ ಜಾಗವಿಲ್ಲ. ಈ ಬಸ್ ಸ್ಟ್ಯಾಂಡಿನ ಕೆಲಸ ಪೂರ್ಣವಾಗಿ ನಿಂತು ಹೋಗಿದೆಯೇ ಎಂದು ಹಿಂದೆ ಕೇಳಿದಾಗ ಇದು ಹಿಂದಿನ ಸರ್ಕಾರದ ಗಮನಕ್ಕೆ ಬಂದಿತ್ತು. ಆಗ ಈ ಕೆಲಸವನ್ನು ಮಾಡಿಕೊಡುತ್ತೇವೆಂದು ಅವತ್ತಿನ ಸಚಿವರು ಒಪ್ಪಿಕೊಂಡಿದ್ದರು. ಆದರೆ ಈಗಿನ ಸಚಿವರು ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಅಕ್ಟೋಬರ ೧೯೯೦ ರಲ್ಲಿ ಮುಗಿಸಿಕೊಡುತ್ತೇವೆಂದು ಹಿಂದಿನ ಸಚಿವರು ಹೇಳಿದ್ದರು. ಈಗ ಇವರು ಮಾರ್ಚ ೯೧ರಲ್ಲಿ ಮುಗಿಸಿಕೊಡುತ್ತೇವೆಂದು ಇವರು ಹೇಳುತ್ತಿದ್ದಾರೆ. ನಿಂತು ಹೊಗಿರತಕ್ಕ ಕೆಲಸ ನಮ್ಮ ಗಮನಕ್ಕೆ ಬಂದಿಲ್ಲವೆಂದು ಇವರು ಹೆಳುತ್ತಿದ್ದಾರೆ ಹಿಂದಿನ ಸರ್ಕಾರದವರು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಇದಕ್ಕೆ ಸರ್ಕಾರದ ಉತ್ತರ ಏನು ?

ಶ್ರೀ ಸಿ. ಬೈರೇಗೌಡ : ಈ ರೀತಿ ತಪ್ಪು ಉತ್ತರವನ್ನು ಕೊಡುವುದಾದರೆ ಅದು ಸದನದ ಹಕ್ಕಿಗೆ ಚ್ಯುತಿ ಬರುತ್ತದೆ.

Sri Aziz Sait : I accept the position today. The position prevailing at that time the then Minister answered to that. I would like to assure my hon. friend that construction has not been stopped. Rs. 20 lakhs project was there. It has been accepted. It has come to Rs. 30 lakhs. By March end I will see that the Bus stand is operated. What else you want ?

ಅಧ್ಯಕ್ಷರು : ಮಾನ್ಯ ಸಾರಿಗೆ ಸಚಿವರು ಬಹಳ ಚೆನ್ನಾಗಿ ಉತ್ತರವನ್ನು ಹೇಳಿದ್ದೀರಿ. "I will make it operate by March" ಎಂದು ಹೇಳಿದಿರಿ. ಒಳ್ಳೆಯದು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಮಂಡಿಸುವುದು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸಭಾಧ್ಯಕ್ಷರೆ, ೀ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ೧೪ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ : ನಗರ ಸಾರಿಗೆ ಬಸ್ಸುಗಳನ್ನು ಕಡಿಮೆಗೊಳಿಸಿರುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೬೩ (೧೧೪೧)

ಶ್ರೀ ರಾಮಲಿಂಗರೆಡ್ಡಿ, (ಜಯನಗರ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಗರ ಸಾರಿಗೆ ಬಸ್ಸುಗಳ ಎಲ್ಲಾ ಮಾರ್ಗಗಳನ್ನು ಚಾಚೂ ತಪ್ಪದೆ ಓಡಿಸಲಾಗುತ್ತಿದೆಯೇ ? ಅಥವಾ ಇಲ್ಲವೇ ?

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಇ) ಸಾರ್ವಜನಿಕರ ಹಿತದೃಷ್ಟಿಯಿಂದ ಮಾರ್ಗಗಳನ್ನು ಕಡಿಮೆ ಮಾಡಿರುವಂಥಹ ಕಡೆಗಳಲ್ಲಿ ಬದಲಿ ವ್ಯವಸ್ಥೆಯನ್ನು ಮಾಡದಿರಲು ಕಾರಣಗಳೇನು ?

ಈ) ಸಾರ್ವಜನಿಕರ ಪ್ರಯಾಣದ ತೊಂದರೆಯನ್ನು ಯಾವಾಗ ಸರಿಪಡಿಸಲಾಗುವದು.

ಶ್ರೀ ಅಜೀಜ್ ಸೇತ್ (ಸಾರಿಗೆ ಸಚಿವರು) :– ಅ) ಡೀಸಲ್ ಕೊರತೆಯಿಂದ ರದ್ದು ಪಡಿಸಿರುವ ಕೆಲವು ಮಾರ್ಗಗಳನ್ನು ಹೊರತುಪಡಿಸಿ ಬೇರೆ ಎಲ್ಲಾ ಮಾರ್ಗಗಳಲ್ಲಿ ಓಡಿಸಲಾಗುತ್ತಿದೆ.

ಆ) ಕೇಂದ್ರ ಸರ್ಕಾರವು ಡೀಸಲ್ ಪೂರೈಕೆಯಲ್ಲಿ ಕಡಿತವನ್ನು ವಿಧಿಸಿದ್ದರಿಂದ